| Deposition Sheets (RP.No.57) Form No.4 |
|---|

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 484/2024**

ಪಿ.ಡಬ್ಲ್ಯು ಃ 2 ಸಿ.ಡಬ್ಲ್ಯು ಃ 2

ಸಾಕ್ಷಿದಾರನ ಹೆಸರು : ಪ್ರಕಾಶ್
ತಂದೆಯ ಹೆಸರು : ರಾಮ ದೇವಾಡಿಗ
ಪ್ರಾಯ : 34 ವರ್ಷ
ಉದ್ಯೋಗ : ಫೋಟೋಗ್ರಾಫರ್
ವಾಸ : ಆನೆಕೆರೆ, ಕಾರ್ಕಳ

ದಿನಾಂಕ 06-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅವರು ನನ್ನ ನೆರೆಕರೆಯವರು. ಚಾಸಾ-1, 3 ರಿಂದ 7 ಪರಿಚಯವಿದೆ. ಚಾಸಾ-1 ನನ್ನ ತಮ್ಮನ ಹೆಂಡತಿ, ಚಾಸಾ-4 ನನ್ನ ತಮ್ಮ, ಚಾಸಾ-5 ನನ್ನ ತಾಯಿ, ಚಾಸಾ-3, 6, 7 ನೆರೆಕರೆಯವರು.

ದಿಃ 05-02-2024 ರಂದು ಸಂಜೆ 7.30 ಗಂಟೆಯ ಸುಮಾರಿಗೆ ನಾನು ನನ್ನ ಮನೆಯ ಹತ್ತಿರದ ಅಂಗಡಿಯಲ್ಲಿ ಪಿಗ್ಮಿ ಸಂಗ್ರಹ ಮಾಡುತ್ತಿರುವಾಗ ಜೋರಾದ ಬೊಬ್ಬೆ ಶಬ್ದ ಕೇಳಿಸಿರುತ್ತದೆ. ತಕ್ಷಣ ನಾನು ಸ್ಥಳಕ್ಕೆ ಹೋಗಿ ನೋಡಲಾಗಿ ಆರೋಪಿ ಚಾಸಾ-1 ರವರನ್ನು ಕೆಳಗೆ ಹಾಕಿ ಜುಟ್ಟು ಹಿಡಿದು ತುಳಿಯುತ್ತಿದ್ದರು. ನಾನು ಆರೋಪಿ ಹಾಗೂ ಚಾಸಾ-1 ರವರಿಗೆ ಗಲಾಟೆ ಮಾಡಬೇಡಿ ಎಂದು ಹೇಳಿರುತ್ತೇನೆ. ಆದರೂ ಸಹ ಆರೋಪಿ ಕೇಳದೆ ನನಗೆ ಕೆನ್ನೆಗೆ ಹೊಡೆದಿರುತ್ತಾರೆ. ಅಲ್ಲದೆ ತುಳು ಭಾಷೆಯಲ್ಲಿ ಅವಾಚ್ಯ ಶಬ್ದಗಳಿಂದ ನಿಂದಿಸಿರುತ್ತಾರೆ ಹಾಗೂ ನಿಮ್ಮನ್ನು ನೋಡಿಕೊಳ್ಳುತ್ತೇನೆ ಎಂದು ಬೆದರಿಕೆ

ಹಾಕಿರುತ್ತಾರೆ. ಆ ಸಮಯದಲ್ಲಿ ನಮ್ಮ ನೆರೆಕರೆಯವರು, ನಮ್ಮ ಹಾಗೂ ಆರೋಪಿ ಕುಟುಂಬದವರು ಸ್ಥಳದಲ್ಲಿದ್ದರು. ಆರೋಪಿಗೆ ನಮ್ಮ ಕುಟುಂಬದವರ ಮೇಲೆ ಮೊದಲಿನಿಂದಲೂ ದ್ವೇಷ ಇದ್ದು ವಿನಾ ಕಾರಣ ನಮ್ಮ ಮೇಲೆ ಸುಳ್ಳು ಆರೋಪಗಳನ್ನು ಮಾಡಿ ನೆರೆಕರೆಯವರ ಬಳಿ ಅಪಪ್ರಚಾರ ಮಾಡುತ್ತಿದ್ದರು. ಘಟನೆ ಕುರಿತು ನಾನು ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

ಪಾಟೀ ಸವಾಲುಃ ಆರೋಪಿ ಪರಃ ಎಸ್.ಕೆ.ಎನ್ ವಕೀಲರು ಸಮಯಾವಕಾಶಕೋರಿದ್ದು, ಮುಂದೂಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು. ಕಾರ್ಕಳ